ನೇರವಾಗಿ ಜೈಲಿಗೆ ಹೋಗಬೇಕಾಗುತ್ತೆ. ಅದು ಓಂಕಾರಯ್ಯನ ಮನೆಯಲ್ಲಿ ಸುರಕ್ಷಿತವಾಗಿ ಇರುತ್ತೆ, ಪೊಲೀಸರ ತನಿಖೆ ಕಮ್ಮಿಯಾದೊಡನೆ ಬಂದು ಒಯ್ಯುವ ಅಂದ. ಆತ ಮೋಸ ಮಾಡಿಯಾನು ಎಂಬ ಯೋಚ್ನೆ ಇಲ್ಲದ್ದರಿಂದ ನಾನು ತಂಗರಾಜುವಿನ ಮಾತು ನಂಬ್ದೆ."

"ನನ್ನೆಣಿಕೆ ಸರಿ. ನಿನ್ನನ್ನು ಹೆದರಿಸಲು ಆ ಹೊತ್ತಿಗೆ ಹೋಟೆಲಿಗೆ ಪೊಲೀಸರಂತೆ ಬರಲು ತನ್ನಿಬ್ಬರು ಮಿತ್ರರಿಗೆ ಹೇಳಿರಬೇಕು. ಇದನ್ನು ಡಿಸೋಜ ಖಚಿತಪಡಿಸಿದ್ದಾನೆ. ಆ ದಿವ್ಸ ಬಸ್ ನಿಲ್ದಾಣದ ಸಮೀಪ ಪಿಕ್ ಪಾಕೆಟ್ ಕಳ್ಳರ ಹಿಡಿಯಲು ಪೊಲೀಸರು ಮಫ್ತಿಯಲ್ಲಿ ಮಾತ್ರ ಇದ್ದರಂತೆ."

"ತಂಗರಾಜು ಕಾಣೆಯಾದಾಗ ಜ್ಯುವೆಲ್ಲರಿಯವರಿಗೆ ಆತನ ಮೇಲೆ ಅನುಮಾನ ಬರಲಿಲ್ವೆ?" ನಾನು ಕೇಳಿದೆ.

"ಇಲ್ಲ. ಯಾಕಂದರೆ ಆ ದಿನವೇ ಆತನ ಕೆಲಸದ ಕಡೆಯ ದಿನ. ಮೊದಲೇ ರಾಜೀನಾಮೆ ಕೊಟ್ಟಿದ್ದ."

"ಮಾಚಯ್ಯ ಇವತ್ತು ಬರುತ್ತಾನೆಂದು ಹೇಗ್ ಗೊತ್ತಾಯ್ತು? ಮೊನ್ನೆ ತಂಗರಾಜು ಯಾಕೆ ಬಂದಿದ್ದು?"

"ತಂಗರಾಜುವಿನ ಫೋನು ಎಲ್ಲಾ ಹೇಳ್ತು..."

"ಅವ್ನ ಫೋನು ಸಂಖ್ಯೆ ನಿನ್ಗೆ ಹೇಗ್ ಸಿಕ್ತು?"

"ಷೋರೂಮಿನವರು ಅವ್ನ ನಂಬರು ಕೊಟ್ಟರು. ತಂಗರಾಜು ತನ್ನ ಮೇಲೆ ಒಂದಿನಿತೂ ಸಂಶಯ ಬರದಂತೆ ಕಳವಿನ ಪ್ಲಾನ್ ಹಾಕ್ದ. ತನ್ನ ಸಹೋದ್ಯೋಗಿಯನ್ನು ಬಂಧಿಸುವಂತೆ ಮಾಡ್ದ. ಆತ ತನ್ನ ಫೋನು ನಂಬರು ಬದಲಾಯಿಸುವ ಅಗತ್ಯವೂ ಇರಲಿಲ್ಲ. ಅದಕ್ಕಿಂತ ಹೆಚ್ಚಾಗಿ ಬದಲಾಯಿಸದಿರುವ ಅಗತ್ಯವಿತ್ತು. ಯಾಕೆ ಗೊತ್ತೆ? ಬದಲಾಯಿಸಿದ್ರೆ ಅನುಮಾನ ಬರುತ್ತೆ ಅಲ್ವೆ? ಅವರಿಬ್ಬರೂ ಮಧುರೈಗೆ ಹೋಗಿ ಅಡಗಿಕೊಂಡಿದ್ದರು. ನನ್ನೆಣಿಕೆಯಂತೆ ಅವರು ಜೊತೆಯಾಗಿ ವಾಸವಾಗಿರಲಿಲ್ಲ. ಆತನ ಕರೆ ಪಟ್ಟಿ ನೋಡ್ದಾಗ, ಆತ ಒಂದು ಸಂಖ್ಯೆಗೆ ಕರೆ ಮಾಡ್ತಿದ್ದ. ಆ ನಂಬರೂ ಮಧುರೈಯಲ್ಲೇ ಇತ್ತು. ಅದು ಮಾಚಯ್ಯನದ್ದು ಅಂತ ಗೊತ್ತಾಯಿತು. ಅದನ್ನು ಟ್ರಾಕ್ ಮಾಡಲು ಮೊಬೈಲ್ ಕಂಪೆನಿಯವರ ಸಹಕಾರ ಕೋರಿದೆ. ಅದರಿಂದಾಗಿ ಆತ ವಿರಾಜಪೇಟೆಯತ್ತ ಪಯಣ ಬೆಳೆಸುವುದು ಗೊತ್ತಾಯ್ತು. ಹಾಂ, ತಂಗರಾಜು ಯಾಕೆ ಬಂದ ಗೊತ್ತೆ? ಪೇಪರ್ ವೆಯಿಟ್ ಕದಿಯೋಕೆ!! ಅದು ಕಾಣೆಯಾದ್ರೆ ಅದರ ಹೊಣೆ ಓಂಕಾರಯ್ಯನ ಮೇಲೆ ಬೀಳುತ್ತೆ. ತಾನು ಸುರಕ್ಷಿತವಾಗಿರಬಹುದೆಂದು ಆತ ತರ್ಕಿಸಿರಬೇಕು. ಮಾಚಯ್ಯ ಓಂಕಾರಯ್ಯನಿಗೆ ಸ್ಪೀಡ್ ಪೋಸ್ಟ್ ಕಳಿಸಿ ವಿಳಾಸ ಸರಿಯೆನ್ನುವುದನ್ನು ಖಚಿತಪಡಿಸಿಕೊಂಡ. ಮಾಚಯ್ಯ ವಜ್ರ ಪಡೆಯಲು ಹೋಗೋಣ ಎಂದು ಪೀಡಿಸುತ್ತಿದ್ದಿರಬೇಕು. ತಂಗರಾಜು ಅದಕ್ಕೆ ಸಮ್ಮತಿಸುತ್ತಿರಲಿಲ್ಲ. ಆಗ ಮಾಚಯ್ಯ ಇಲ್ಲಿಗೆ ಬರುವ ನಿರ್ಧಾರ ಮಾಡಿದ್ದಾನೆ. ಅದನ್ನು ಅರಿತ, ತಂಗರಾಜು ಮೊದಲೇ ಬಂದು ಪೇಪರ್ ವೆಯಿಟ್ ಕದ್ದೊಯ್ದ. ಅವನನ್ನ ಬಂಧಿಸಲಿಕ್ಕೆ ಮಧುರೈ ಪೊಲೀಸರಿಗೆ ಹೇಳಿದ್ದೀನಿ."

ಓಂಕಾರಯ್ಯ ಹಣ ಹಿಂದಿರುಗಿಸುವ ಭಾರದಿಂದ ಪಾರಾದುದಕ್ಕೆ ದೊಡ್ಡದಾಗಿ ನಿಡುಸುಯ್ದ.

## ರವಿರಾಜ ಬೈಕಂಪಾಡಿ

ಮಂಗಳೂರಿನಲ್ಲಿ ಲೆಕ್ಕಪರಿಶೋಧಕರಾಗಿರುವ ರವಿರಾಜ ಅವರ ಮೊದಲ ಪತ್ತೆದಾರಿ ಕತೆ 'ಭವಿಷ್ಯ' ಪ್ರಕಟವಾಗಿದ್ದು 'ಸುಧಾ' ವಾರಪತ್ರಿಕೆಯಲ್ಲಿ. ಪತ್ತೆದಾರಿ ಕಿರುಕಾದಂಬರಿ 'ಅದಲು–ಬದಲು' ವಾರಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ವಿವಿಧ ಪತ್ರಿಕೆಗಳಲ್ಲಿ ಕತೆ–ನೀಳ್ಗತೆಗಳೂ ಪ್ರಕಟಗೊಂಡಿವೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನಲ್ಲಿ ವಾಸವಾಗಿದ್ದಾರೆ.